4) ಪ್ರೊ.ಎಸ್.ವೆಂಕಟರಾವ್, ಬೆಂಗಳೂರು

5) ಎಸ್.ರಾಮಮೂರ್ತಿ, ಬೆಂಗಳೂರು

6) ರಾಮರಾವ್ ಕುಲಕರ್ಣಿ, ಬೆಂಗಳೂರು

7) ಜಿ.ಚೆನ್ನವೀರಪ್ಪ ದಾವಣಗೆರೆ

8) ಎಸ್.ಎಸ್.ಸಂಗೊಳ್ಳಿ, ಬೆಂಗಳೂರು

9) ಶಂಕರ ಮುಗ್ರೂಡ್, ರಾಯಚೂರು

10) ಕುಮಾರ್ ಗೌಡ, ಬಳ್ಳಾರಿ

11) ಬಸಣ್ಣ ಮನಗೂರೆ, ಬೀದರ್

12) ವಿ.ಎಸ್.ಅರಟ್ಟಿ ಧಾರವಾಡ

13) ಎಸ್.ಪಿ.ಹನಿಮಿನಹಾಳ್, ಬೆಳಗಾಂ

ಕೃಷ್ಣರಾಜಪುರ ಹಾಗೂ ಮಹದೇವಪುರ ನಗರಸಭೆಯಲ್ಲಿ ನಡೆದಿರುವ ಹಣ ದುರುಪಯೋಗ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 946(1498)

ಸದಸ್ಯರ ಹೆಸರು: ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ)

ಪ್ರಶ್ನೆ

ಅ) ಪತ್ರಿಕೆಯೊಂದು ವಿಧಾನಸಭಾ ಕ್ಷೇತ್ರದ ಕೃಷ್ಣರಾಜಪುರ ಮತ್ತು ಮಹದೇವಪುರ ನಗರಸಭೆಗಳಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಎಷ್ಟು ಹಣ ದುರುಪಯೋಗವಾಗಿದೆ? ವಿವರ ನೀಡುವುದು?

ಆ) ಈ ಪ್ರಕರಣದಲ್ಲಿ ಎಷ್ಟು ಜನ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ? ಅವರುಗಳ ವಿವರ ನೀಡುವುದು?

ಇ) ಈ ಅವ್ಯವಹಾರಕ್ಕೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ?

ಉತ್ತರಿಸುವ ಸಚಿವರು: ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಉತ್ತರ

ಅ) ಕೆ.ಆರ್.ಪುರಂ ಮತ್ತು ಮಹದೇವಪುರ ನಗರಸಭೆಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟವಾದ ದೂರನ್ನು ಸರ್ಕಾರದಲ್ಲಿ ಸ್ವೀಕರಿಸಿಲ್ಲ. ಆದಾಗ್ಯೂ ಬೆಳ್ಳಂದೂರು ವಾರ್ಡಿನ ಬೆಂಗಳೂರು ಸುತ್ತಲಿನ 7 ನಗರಸಭೆಗಳು ಹಾಗೂ ಒಂದು ಪುರಸಭೆಗೆ ನಿಗದಿತ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಸ್ಟಾಂಪ್ ಶುಲ್ಕದ ಮೊತ್ತವನ್ನು ಪಾವತಿಸಿರುವುದಾಗಿ ತಿಳಿದು ಬಂದಿದ್ದು, ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದ ಪಟ್ಟಣ ಪಂಚಾಯ್ತಿ : ಪುರಸಭೆಗಳಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 947(1497)

ಸದಸ್ಯರ ಹೆಸರು: ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ)

ಪ್ರಶ್ನೆ

ಅ) ರಾಜ್ಯದ ಯಾವ ಯಾವ ಪಟ್ಟಣ ಪಂಚಾಯ್ತಿ ಪುರಸಭೆಗಳಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಜಾರಿಯಲ್ಲಿದೆ?

ಆ) ಎಂದಿನಿಂದ ಈ ಆಸ್ತಿ ತೆರಿಗೆ ಪದ್ಧತಿ ಜಾರಿಗೆ ತರಲಾಗುವುದು ಅಥವಾ ಈಗಾಗಲೇ ತರಲಾಗಿದೆಯೇ?

ಇ) ಇದುವರೆಗೆ ರಾಜ್ಯದ ಪಟ್ಟಣ ಪಂಚಾಯತಿ ಪುರಸಭೆಗಳಿಂದ ಸಂಗ್ರಹವಾಗುತ್ತಿದ್ದ ಆಸ್ತಿ ತೆರಿಗೆ ಎಷ್ಟು? ಪಟ್ಟಣ ಪಂಚಾಯತಿ : ಪುರಸಭೆವಾರು ವಿವರ ನೀಡುವುದು?

ಈ) ಸ್ವಯಂ ಘೋಷಿತ ಆಸ್ತಿ ತೆರಿಗೆಯಿಂದ ಎಷ್ಟು ತೆರಿಗೆ ಸಂಗ್ರಹವಾಗುತ್ತದೆಂದು ನಿರೀಕ್ಷಿಸಲಾಗಿದೆ. ಪುರಸಭೆವಾರು ವಿವರ ನೀಡುವುದು?

ಉತ್ತರಿಸುವ ಸಚಿವರು: ಶ್ರೀ ಮಲ್ಲಿಕಾರ್ಜುನ ಎಂ.ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)